ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 23/2/21

# ಆಯವ್ಯಯಕ್ಕೆ ಅಂತಿಮ ರೂಪ ನೀಡಲು ಕಸರತ್ತು

23-2-21

■ ವಿಜಯವಾಣಿ ಸುದ್ದಿಜಾಲ, ಬೆಂಗಳೂರು

ಇಲಾಖಾವಾರು ಅನುದಾನ ಬೇಡಿಕೆ ಬಗ್ಗೆ ಚರ್ಚೆ ಪೂರ್ಣಗೊಳಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಜೆಟ್‌ಗೆ ಅಂತಿಮ ರೂಪ ನೀಡುವ ನಿಟ್ಟಿನಲ್ಲಿ ಕಸರತ್ತು ನಡೆಸಿದ್ದಾರೆ.



» ಸಂಘ ಸಂಸ್ಥೆಗಳ ಜತೆಗೆ ಸಿಎಂ ಚರ್ಚೆ

ಸೋಮವಾರ ಬೆಳಗ್ಗೆ ತೆರಿಗೆ ಸಂಗ್ರಹಣಾ ಇಲಾಖೆಗಳ ಬಗ್ಗೆ ಚರ್ಚೆ ನಡೆಸಿದ ಸಿಎಂ, ಮಧ್ಯಾಹ್ನ ಆ ಇಲಾಖೆಗೆ ಸಂಬಂಧಿಸಿದ ವಾಣಿಜ್ಯ, ಸಾರಿಗೆ, ಅಬಕಾರಿ ಮತ್ತು ಭೂ ಮಾರುಕಟ್ಟೆ ಸಂಘ ಸಂಸ್ಥೆಗಳ ಜತೆ ಸಮಾಲೋಚನೆ ನಡೆಸಿದರು. ಪ್ರತಿ ಇಲಾಖೆಗೂ ಸಂಬಂಧಿಸಿ ಪರಾಮರ್ಶೆ ನಡೆಸಿರುವ ಸಿಎಂ, ಯಾವುದಕ್ಕೆ ಆದ್ಯತೆ ನೀಡಬೇಕು. ತೆರಿಗೆ ಸಂಗ್ರಹಣಾ ವಿಭಾಗದಲ್ಲಿ ಎಷ್ಟು ಒತ್ತು ನೀಡಬೇಕು ಎನ್ನುವ ನಿಟ್ಟಿನಲ್ಲಿ ಚಿಂತನೆ ನಡೆಸಿದ್ದಾರೆ.

ಈ ಬಾರಿಯೂ ಸಿಎಂ ಬಜೆಟ್ ಪೂರ್ವ ಸಭೆ ನಡೆಸಿದ್ದಾರೆ.
ವಿವಿಧ ಬೇಡಿಕೆಗಳನ್ನ ಈಡೇರಿಸುವಂತೆ ಮನವಿ ಮಾಡಿದ್ದೇವೆ.
ಉದ್ಯಮಗಳು ಕೋವಿಡ್‌ನಿಂದ ಭಾರಿ ನಷ್ಟದಲ್ಲಿರುವ ಕಾರಣ
ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕು. ಪ್ರತಿ ಜಿಲ್ಲೆಯಲ್ಲೂ ಫುಡ್
ಪಾರ್ಕ್ ಮಾಡಬೇಕು, ಅದಕ್ಕಾಗಿ 50 ಎಕರೆ ಮೀಸಲಿಡಬೇಕು.
ಪ್ರಧಾನಿ ನರೇಂದ್ರ ಮೋದಿ ಆಶಯದಂತೆ ರೈತರ ಆದಾಯ ದ್ವಿಗುಣ
ಮಾಡಲು ಇದರಿಂದ ಸಾಧ್ಯ ಎಂಬುದನ್ನು ಮನವರಿಕೆ ಮಾಡಿದ್ದೇವೆ
ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಪಿ.ಸುಂದರ್ ತಿಳಿಸಿದರು.

## ಮೆಟ್ರೋ ವಿಸ್ತರಣೆಗೆ ಆಗ್ರಹ

ವಸಂತಾನರಸಪುರದಲ್ಲಿ ಏಷ್ಯಾದಲ್ಲೇ ಎರಡನೇ
ಅತಿದೊಡ್ಡ ಕೈಗಾರಿಕಾ ಪ್ರದೇಶವಿದೆ. ಈ ಹಿನ್ನೆಲೆಯಲ್ಲಿ
ತುಮಕೂರಿನವರೆಗೂ ಸಬರ್ಬನ್ ರೈಲು ಹಾಗೂ
ಮೆಟ್ರೋ ರೈಲು ವಿಸ್ತರಣೆಗೆ ಮಾಡುವಂತೆ ಎಫ್‌ಕೆಸಿಸಿಐ
ವಿನಂತಿಸಿಕೊಂಡಿದೆ. ಒಂದು ಜಿಲ್ಲೆ ಒಂದು
ಉತ್ಪನ್ನ ಯೋಜನೆ ಜಾರಿಗೆ ಅಗತ್ಯ ಕ್ರಮ
ತೆಗೆದುಕೊಳ್ಳಬೇಕು. ಮಹಿಳೆಯರಿಗೆ ಉದ್ಯೋಗ
ಹೆಚ್ಚಳಕ್ಕೆ ಅಗತ್ಯ ಕ್ರಮ ಸೇರಿ ಹಲವು ವಿಚಾರಗಳಿಗೆ
ಸಂಬಂಧಿಸಿದಂತೆ ಎಫ್‌ಕೆಸಿಸಿಐ ಮನವಿ ಮಾಡಿದೆ.

## ಚಿತ್ರನಗರಿ ನಿರ್ಮಾಣಕ್ಕೆ ಮನವಿ

ಚಿತ್ರನಗರಿ ಆರಂಭಕ್ಕೆ ಮನವಿ ಮಾಡಲಾಗಿದೆ ಎಂದು
ಫಿಲ್ಮ್ ಚೇಂಬರ್ ಅಧ್ಯಕ್ಷ ಜೈರಾಜ್ ತಿಳಿಸಿದ್ದಾರೆ. ಸರ್ಕಾರಕ್ಕೆ
ಕಾಲಮಿತಿ ನೀಡುವ ಪರಿಸ್ಥಿತಿ ಈಗ ಇಲ್ಲ. ಹಿಂದೆ ರಾಜ್
ಕುಮಾರ್ ಅವರ ಕಾಲದಲ್ಲಿ ಈ ಸ್ಥಿತಿ ಇತ್ತು. ಈಗ ಮನವಿ
ಮಾಡಿಕೊಂಡಿದ್ದೇವೆ ಅಷ್ಟೇ ಎಂದು ಪ್ರತಿಕ್ರಿಯಿದರು.